ಪರಿಗಣಿಸಬೇಕಿದ್ದಲ್ಲಿ ಅದಕ್ಕೆ ಒಂದೂವರೆ ಇಲ್ಲವೇ ಎರಡು ಸಾವಿರ ವರ್ಷಗಳ ಚರಿತ್ರೆಯಿರಬೇಕೆಂದು ಹೇಳಲಾಗುತ್ತದೆ ಮತ್ತು ಒಂದು ಭಾಷೆಯ ಈ ಚರಿತ್ರೆಯನ್ನು ಅದರಲ್ಲಿ ಪಳೆಯುಳಿಕೆಗಳಾಗಿ ಉಳಿದುಕೊಂಡಿರುವ ಶಾಸನ, ನಾಣ್ಯ, ಕಾವ್ಯ ಮೊದಲಾದವುಗಳು ಎಷ್ಟು ಹಳೆಯವು ಎಂಬುದರ ಮೇಲೆ ತೀರ್ಮಾನಿಸಲಾಗುತ್ತದೆ. ಆದರೆ, ಈ ಎಲ್ಲಾ ಬಗೆಯ ಪಳೆಯುಳಿಕೆಗಳೂ ಬರಹದ ಪಳೆಯುಳಿಕೆಗಳಲ್ಲದೆ ಮಾತಿನ ಪಳೆಯುಳಿಕೆಗಳಲ್ಲ. ಯಾಕೆಂದರೆ, ಮಾತಿನ ಮಾಧ್ಯಮವಾಗಿರುವ ಉಲಿಗಳು ಯಾವ ಬಗೆಯ ಪಳೆಯುಳಿಕೆಗಳನ್ನೂ ಉಳಿಸುವುದಿಲ್ಲ. ಹಾಗಾಗಿ, ಪಳೆಯುಳಿಕೆಗಳ ನೆರವನ್ನು ಬಳಸಿ ಒಂದು ಬರಹ ಎಷ್ಟು ಹಳೆಯದು ಎಂದು ಹೇಳಲು ಬರುತ್ತದೆಯಲ್ಲದೆ, ಒಂದು ಭಾಷೆ (ಮಾತು) ಎಷ್ಟು ಹಳೆಯದು ಎಂದು ಹೇಳಲು ಬರುವುದಿಲ್ಲ.



ಸಂಗೀತ ಶಾಸ್ತ್ರದ ತಾಳದ ವಿವರಣೆಗಳು, ಸಂಜ್ಞೆಗಳುಳ್ಳ ಶಾಸನ.

2. ಭಾರತದ ಭಾಷೆಗಳನ್ನು ಮುಖ್ಯವಾಗಿ ಇಂಡೊ–ಆರ್ಯನ್, ದ್ರಾವಿಡ, ಟಿಬೆಟೊ–ಬರ್ಮನ್ ಮತ್ತು ಮುಂಡ ಎಂಬ ನಾಲ್ಕು ನುಡಿಕುಟುಂಬಗಳಲ್ಲಿ ಗುಂಪಿಸಲಾಗಿದೆ; ಈ ಗುಂಪಿಸುವಿಕೆ ಅವು ಎಷ್ಟು ಹಿಂದೆ ಒಂದರಿಂದೊಂದು ಬೇರ್ಪಟ್ಟಿದ್ದುವು ಎಂಬುದನ್ನು ತಿಳಿಯಲು ನೆರವಾಗುತ್ತದೆ.

ಆದರೆ, ಈ ಗುಂಪಿಸುವಿಕೆಗೆ ಆಧಾರವಾಗಿರುವುದು ಮಾತಿನಲ್ಲಿ ಬಳಕೆಯಾಗುವ ಉಲಿಗಳಲ್ಲದೆ, ಬರಹದಲ್ಲಿ ಬಳಕೆಯಾಗುವ ಅಕ್ಷರಗಳಲ್ಲ. ಯಾಕೆಂದರೆ, ಭಾರತದ ಹೆಚ್ಚಿನ ಬರಹಗಳೂ ಬ್ರಾಹ್ಮೀ ಎಂಬ ಒಂದೇ ಲಿಪಿಯಿಂದ ಬೆಳೆದು ಬಂದಿರುವ ಲಿಪಿಗಳನ್ನು ಬಳಸುತ್ತಿವೆ; ಹಾಗಾಗಿ, ಭಾರತದ ಭಾಷೆಗಳನ್ನು ಗುಂಪಿಸುವಲ್ಲಿ ಅವುಗಳ ಅಕ್ಷರಗಳು ಯಾವ ನೆರವನ್ನೂ ನೀಡುವುದಿಲ್ಲ.

3. ಸಂಸ್ಕೃತವನ್ನು ಒಂದು ಭಾಷೆ ಎಂಬುದಾಗಿ ಕರೆಯಲಾಗುತ್ತದೆ; ಆದರೆ, ನಿಜಕ್ಕೂ ಅದು ಒಂದು ಬರಹ ಮಾತ್ರ, ಭಾಷೆಯಲ್ಲ. ಯಾಕೆಂದರೆ, ಒಂದು ಭಾಷೆಯಲ್ಲಿ ಇರಬೇಕಾದ ಹಲವು ಮುಖ್ಯ ಗುಣಧರ್ಮಗಳಲ್ಲಿ ಯಾವುದೂ ಈ ಸಂಸ್ಕೃತ ಎಂಬುದರಲ್ಲಿಲ್ಲ.

ಮಾತನ್ನು ಮಕ್ಕಳು ಸಹಜವಾಗಿ, ಎಂದರೆ ತಮ್ಮ ಬೆಳವಣಿಗೆಯ ಅಂಗವಾಗಿ, ಪಡೆಯುತ್ತಾರೆ. ಅದನ್ನು ಯಾರೂ ಅವರಿಗೆ ಕಲಿಸಿಕೊಡುವುದಿಲ್ಲ. ಆ ರೀತಿ ಮಕ್ಕಳು ಸಹಜವಾಗಿ ಪಡೆದುಕೊಳ್ಳುವ ಮಾತು ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತಾ ಹೋಗುತ್ತದೆ ಮತ್ತು ಹಾಗೆ ಬದಲಾಗುವುದರ ಮೂಲಕ ಅದು ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುತ್ತದೆ.

ಕನ್ನಡ ಮಾತಿನಲ್ಲಿ (ಭಾಷೆಯಲ್ಲಿ) ನಡೆದ ಇಂತಹ ಹಲವು ಬಗೆಯ ಬದಲಾವಣೆಗಳನ್ನು ಕನ್ನಡದ ಬರಹಗಾರರು ತಮ್ಮ ಬರಹಗಳಲ್ಲಿ ಕಾಲದಿಂದ ಕಾಲಕ್ಕೆ ಅಳವಡಿಸಿಕೊಂಡು ಬಂದುದರಿಂದಾಗಿ, ಕನ್ನಡ ಬರಹ ಹಳೆಗನ್ನಡವಿದ್ದುದು ನಡುಗನ್ನಡವಾಗಿ, ಇವತ್ತು ಹೊಸಗನ್ನಡವಾಗಿದೆ.

ಇದಕ್ಕೆ ಬದಲು, ಸಂಸ್ಕೃತ ಎರಡು ಸಾವಿರ ವರ್ಷಗಳಿಂದಲೂ ಸ್ವಲ್ಪವೂ ಬದಲಾಗದೆ ಹಾಗೆಯೇ ಉಳಿದಿದೆ. ಭಾಷೆಗಳಲ್ಲಿ ಸ್ವಾಭಾವಿಕವಾಗಿ ನಡೆಯುವ ಯಾವ ಬಗೆಯ ಬದಲಾವಣೆಯೂ ಅದರಲ್ಲಿ ನಡೆದಿಲ್ಲ. ಅಂತಹ ಬದಲಾವಣೆಗಳು ಅದರಲ್ಲಿ ನಡೆಯದ ಹಾಗೆ ಪಾಣಿನಿಯ ವ್ಯಾಕರಣದ, ಮತ್ತು ಸಾವಿರಾರು ಬರಹಗಳ ಕಟ್ಟು ತಡೆಯನ್ನೊಡ್ಡಿದೆ. ಹಾಗಾಗಿ, ಭಾಷೆ ಎಂಬುದಾಗಿ ಕರೆಯಿಸಿಕೊಳ್ಳಲು ಬೇಕಾಗುವಂತಹ ಸ್ವಾಭಾವಿಕತೆ ಇಲ್ಲವೇ ಜೀವಂತಿಕೆ ಅದರಲ್ಲಿ ಉಳಿದಿಲ್ಲ.

ಸಂಸ್ಕೃತವೆಂಬ ಭಾಷೆಯೊಂದು ಎರಡು ಸಾವಿರ ವರ್ಷಕ್ಕೂ ಹಿಂದೆ ಬಳಕೆಯಲ್ಲಿದ್ದಿರಬಹುದು; ಹೀಗೆ ಇದ್ದಿರಬಹುದಾದ ಆ ಭಾಷೆ ಆಮೇಲೆ ಪ್ರಾಕೃತ, ಪಾಲಿ, ಅಪಭ್ರಂಶ ಮೊದಲಾದವುಗಳಾಗಿ ಬದಲಾಗಿದೆ, ಮತ್ತು ಅವು ಇನ್ನಷ್ಟು ಬದಲಾಗುತ್ತಾ ಬಂದು, ಇವತ್ತಿನ ಹಿಂದಿ, ಬಾಂಗ್ಲಾ, ಮರಾಠಿ, ಗುಜರಾತಿ, ಪಂಜಾಬಿ ಮೊದಲಾದ ಭಾಷೆಗಳಾಗಿವೆ.

4. ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಚರಿತ್ರೆಯಿದೆ ಎಂಬುದಾಗಿ ಬರೆಯುವವರು ಹಲವರಿದ್ದಾರೆ; ಇದಕ್ಕೆ ಆಧಾರವಾಗಿ ಇವರು ಕನ್ನಡದಲ್ಲಿ ಬರೆದಿರುವ, ಮತ್ತು ಕನ್ನಡ ಪದಗಳನ್ನು ಬಳಸಿರುವ ಹಳೆಯ ಶಾಸನಗಳನ್ನು ಬಳಸಿಕೊಳ್ಳುತ್ತಾರೆ. ಆದರೆ, ಈ ಶಾಸನಗಳು ನಮಗೆ ತಿಳಿಸುವುದು ಕನ್ನಡ ಬರಹ ಎಷ್ಟು ಹಿಂದಿನದು ಎಂಬುದನ್ನಲ್ಲದೆ, ಕನ್ನಡ ಭಾಷೆ ಎಷ್ಟು ಹಿಂದಿನದು ಎಂಬುದನ್ನಲ್ಲ; ನಿಜಕ್ಕೂ ಕನ್ನಡ ಭಾಷೆ ಇದಕ್ಕಿಂತಲೂ ಎಷ್ಟೋ ಸಾವಿರ ವರ್ಷ ಹಿಂದಿನದಾಗಿರಬಲ್ಲುದು.

ಈ ರೀತಿ, ಮಾತು ಮತ್ತು ಬರಹಗಳನ್ನು ಹೋಲಿಸಿ ನೋಡಿದಾಗ, ಅವುಗಳಲ್ಲಿ ಮುಖ್ಯವಾಗಿ ಮಾತನ್ನು ಮಾತ್ರವೇ ಭಾಷೆ ಇಲ್ಲವೇ ನುಡಿ ಎಂಬ ಹೆಸರಿನಿಂದ ಕರೆಯಲು ಬರುತ್ತದೆ ಎಂಬ ವಿಷಯ ಸ್ಪಷ್ಟವಾಗುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**


